ಭಾಗವಹಿಸಬೇಕಾಗಿದೆ. ಇದು ನೀರಿನ ವಿವಾದದ ಬಗ್ಗೆ. ಮತ್ತೆ ಟ್ರಿಬೂನಲ್ ನೇಮಿಸುವ ಬಗ್ಗೆ ಮತ್ತೆ ಇದರಲ್ಲಿ ಕಾವೇರಿ ನೀರಿನ ಒಂದು ಮಹತ್ವದ ವಿಚಾರ ಈ ರಾಷ್ಟ್ರೀಯ ಸಭೆಯಲ್ಲಿ ಬರುತ್ತದೆ. ಮುಖ್ಯಮಂತ್ರಿಗಳು ಇದರ ಸದಸ್ಯರಾಗಿದ್ದಾರೆ. ಇದು ರಾಜ್ಯ ಜೀವಾಳದ ಪ್ರಶ್ನೆ ಆಗಿದೆ. ಅಲ್ಲಿ ಪ್ರಧಾನ ಮಂತ್ರಿಗಳು, ಸರ್ಕಾರದ ಇತರ ಮಂತ್ರಿಗಳು, ಬೇರೆ ಕಾರ್ಯಕರ್ತರುಗಳ, ಮುಖಂಡರುಗಳ ಸಭೆಯನ್ನು ಮಾಡುತ್ತಾರೆ. ಇದರಲ್ಲಿ ರಾಜಕೀಯ ಮಾಡುವಂತಹದ್ದೇನಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದರಲ್ಲಿ ರಾಜಕೀಯ ಜಾಸ್ತಿಯಾಗಿದೆ. ಇವತ್ತಿನವರೆಗೂ ಕಾವೇರಿ ನೀರಿನ ಬಗ್ಗೆ ಯಾವ್ದದೇ ಒಂದು ತೀರ್ಮಾನವನ್ನು ಮಾಡಿಲ್ಲ. ಅಪ್ರೋಸಿಷನ್ ಲೀಡರ್‌ಗಳನ್ನು ನೋಡುವುದಕ್ಕೆ ಹೋಗಿದ್ದಾರೆ. ರಾಜ್ಯಕ್ಕೆ ಯಾವುದೇ ಒಳ್ಳೆಯ ಕೆಲಸವನ್ನು ಮಾಡುವುದಕ್ಕಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯ ಮಂತ್ರಿಗಳು ಹೌದು, ಹಾಗೂ ರಾಷ್ಟ್ರದ ನಾಯಕರು ಆಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ಬೇಗನೆ ಕಳುಹಿಸಿ. ಅವರನ್ನು ರಾಷ್ಟ್ರದ ನಾಯಕರನ್ನು ಮಾಡಿ ಯಾವಾಗ ಡೆಲ್ಲಿಗೆ ಕಳುಹಿಸುತ್ತೀರಿ ಹೇಳಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸಮಯ ಬಂದಾಗ ಹೋಗುತ್ತಾರೆ.

(ಗೊಂದಲ)

ಶ್ರೀ ಬಸವರಾಜ್ ಪಾಟೀಲ್.—ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಯಾವಾಗ ಉತ್ತರ ಕೊಡಿಸುತ್ತೀರಾ ಎನ್ನುವುದನ್ನು ಹೇಳಲಿಲ್ಲ.

ಅಧ್ಯಕ್ಷರು.—ನಾಡಿದ್ದು ಉತ್ತರ ಕೊಡಿಸುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ಕಂಗೆಡಬೇಡಿ ಕೊಳ್ಳಬೇಕು. ಈಗ ಪ್ರಶ್ನೆ ಳಿಟಿ ಶ್ರೀಮತಿ ನಾಗರತ್ನಮ್ಮನವರು ಕೇಳಬೇಕು.

ಅಭಿವೃದ್ಧಿ ಅನುದಾನದ ಬಗ್ಗೆ

ಳಟಿ. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ),—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪ ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿನ ಪುರಸಭೆಗಳ ಅಭಿವೃದ್ಧಿಗಾಗಿ ಸರ್ಕಾರದವರು ಕೊಟ್ಟಿರುವ ಹಣವೆಷ್ಟು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)?

ಆ) ಸದರೀ ಹಣದಲ್ಲಿ ಖರ್ಚಾಗಿರುವ ಹಣವೆಷ್ಟು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು

ಇ) ಪುರಸಭಾ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರದವರು ಈಗ ಕೈಗೊಂಡಿರುವ ನೂತನ ಯೋಜನೆಗಳಾವುವು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ?

ಶ್ರೀ ಎಂ. ಚಂದ್ರಶೇಖರ್, (ನಗರಾಭಿವೃದ್ಧಿ ಮಂತ್ರಿಗಳು).—

ಅ) ಹಣ ಬಿಡುಗಡೆ ಮಾಡಿದ ವಿವರವು ಪಟ್ಟಿಯಲ್ಲಿ ಕೊಟ್ಟಿರುತ್ತದೆ.

ಆ) ಪುರಸಭೆಗಳಿಂದ ಪಡೆದು ವಿವರಗಳನ್ನು ಪ್ರತ್ಯೇಕವಾಗಿ ಒದಗಿಸಲಾಗುವುದು

ಇ) ನೂತನ ಯೋಜನೆ ಯಾವುದೂ ಇಲ್ಲ

ಅಭಿವೃದ್ಧಿ ಅನುದಾನ

ಜಿಲ್ಲೆಯ ಹೆಸರು	೧೯೮೪–೮೫	೧೯೮೫–೮೬	೧೯೮೬–೮೭
ಬೆಂಗಳೂರು	೫,೧೦,೦೦೦	೧೩,೫೫,೮೦೦	೩,೭೬,೦೦೦
ಶಿವಮೊಗ್ಗ	೫,೫೦,೦೦೦	೬,೨೫,೦೦೦	೫೦,೦೦೦
ಚಿತ್ರದುರ್ಗ	೫,೦೦,೦೦೦	೫,೯೦,೦೦೦	೧,೦೦,೦೦೦
ತುಮಕೂರು	೪,೯೦,೦೦೦	೭,೬೪,೮೦೦	೫೦,೦೦೦
ಕೋಲಾರ	೬,೪೦,೦೦೦	೯,೦೩,೪೦೦	೧,೫೦,೦೦೦
ಗುಲ್ಬರ್ಗಾ	೪,೮೦,೦೦೦	೧೦,೨೧,೮೦೦	೨,೫೦,೦೦೦
ರಾಯಚೂರು	೪,೯೦,೦೦೦	೮,೯೫,೦೦೦	೧,೦೦,೦೦೦
ಬೆಳಗಾಂ	೭,೨೦,೦೦೦	೧೨,೧೬,೮೦೦	೪,೫೦,೦೦೦
ಬೀದರ್	೩,೧೦,೦೦೦	೬,೦೮,೫೦೦	೧,೦೦,೦೦೦
ಬಿಜಾಪುರ	೮,೩೦,೦೦೦	೧೫,೭೦,೦೦೦	೧,೦೦,೦೦೦
ಉತ್ತರ ಕನ್ನಡ	೪,೮೦,೦೦೦	೧೧,೦೫,೦೦೦	೫,೫೦,೨೦೦
ಧಾರವಾಡ	೮,೫೦,೦೦೦	೧೩,೪೧,೮೦೦	೪,೭೫,೦೦೦
ಚಿಕ್ಕಮಗಳೂರು	೩,೬೦,೦೦೦	೭,೨೬,೮೦೦	೧,೫೦,೦೦೦
ಹಾಸನ	೪,೬೦,೦೦೦	೯,೫೮,೫೦೦	೧,೫೦,೦೦೦
ಕೊಡಗು	೩,೦೦,೦೦೦	೩,೯೦,೦೦೦	
ಮಂಡ್ಯ	೪,೦೦,೦೦೦	೮,೩೧,೭೦೦	
ಮೈಸೂರು	೫,೧೦,೦೦೦	೯,೧೦,೨೦೦	೨,೫೦,೦೦೦
ದಕ್ಷಿಣ ಕನ್ನಡ	೫,೧೦,೦೦೦	೭,೧೫,೦೦೦	
ಬಳ್ಳಾರಿ	೫,೯೦,೦೦೦	೧೦,೫೫,೨೦೦	೨,೦೦,೦೦೦
			೧,೦೨,೧೦,೭೦೦

for Sulab Souchalaya

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ಅಧ್ಯಕ್ಷರೆ, ಇವರು ಜಿಲ್ಲಾ ಮಾಹಿತಿಯನ್ನು ಕೊಟ್ಟಿದ್ದಾರೆ. ನಾನು ಪುರಸಭೆಗಳ ಡೆವಲಪ್‌ಮೆಂಟಿಗೆ ಎಷ್ಟುಹಣ ಕೊಟ್ಟಿದ್ದೀರಿ ಎಂದು ಕೇಳಿದ್ದೆ. ಈಗ ಚಿತ್ರದುರ್ಗ ಉದಾಹರಣೆಗೆ ತೆಗೆದುಕೊಂಡರೆ ೧೯೮೪-೮೫ರಲ್ಲಿ ೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ೧೯೮೫–೮೬ರಲ್ಲಿ ೫ ಲಕ್ಷ ೯೦ ಸಾವಿರರೂಪಾಯಿ ಕೊಟ್ಟಿದ್ದಾರೆ. ೧೯೮೬–೮೭ ಕೇವಲ ೧ಲಕ್ಷ ರೂಪಾಯಿ ಡೆವಲಪ್ ಮೆಂಟಿಗಳಿಗೆ ಕೊಟ್ಟಿರುವುದು. ಮೈಸೂರಿನಲ್ಲಿ ೧೯೮೪-೮೫ರಲ್ಲಿ ೫ ಲಕ್ಷ ೧೦ ಸಾವಿರ ರೂಪಾಯಿ ಕೊಟ್ಟಿದ್ದಾರೆ, ೧೯೮೫–೮೬ ೯ಲಕ್ಷ ೧೦ ಸಾವಿರ ರೂಪಾಯಿ ಕೊಟ್ಟಿದ್ದಾರೆ, ೧೯೮೬–೮೭ರಲ್ಲಿ ೨ ಲಕ್ಷ ೫೦ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಇವರು ಮಾಡಿರತಕ್ಕ ಲಕ್ಷಣ ಏನು? ಎಂದು ಅರ್ಥವಾಗುತ್ತಿಲ್ಲ. ಅಲ್ಲಿ ಆವರಿಗೆ ಆಕ್ಟ್ರಾಯಿ ಸಬ್ಸಿಡಿ ಕೊಟ್ಟಿಲ್ಲ ಅವರು ಏನು ಮಾಡಬೇಕು, ಆವರು ದೀಪ ಹಾಕುವುದು ಹೇಗೆ, ಪೌರಕಾರ್ಮಿಕರಿಗೆ ಸಂಬಳ ಕೊಡುವುದು ಹೇಗೆ. ತಾವು ಆಕ್ಟ್ರಾಯಿ ಸಬ್ಸಿಡಿ ಕೊಡದೇ ಹೋದರೆ ಮುನಿಸಿಪಾಲಿಟಿಗಳು ಏಗೆ ಕೆಲಸ ಮಾಡಬೇಕು. ಇದರ ಬಗ್ಗೆ ಮಾನ್ಯಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್,—ಈ ಪಟ್ಟಿಯಲ್ಲಿ ಕೊಟ್ಟಿರುವುದು ಅಭಿವೃದ್ಧಿಗಾಗಿ ಕೊಟ್ಟಿರುವ ಹಣ ಆಕ್ಟ್ರಾಯಿ ಹಣವಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಒಂದೊಂದು ವರ್ಷದಲ್ಲಿ ಒಂದೊಂದು ಜಿಲ್ಲೆಗೆ ಹೆಚ್ಚಿಗೆ ಕೊಟ್ಟಿರುವುದು ಗಮನಕ್ಕೆ ಬರುತ್ತಿದೆ, ಆಯಾಯ ಪುರಸಭೆಗಳ ಬೇಡಿಕೆ ಮೇಲೆ ಒಂದೊಂದು ಜಿಲ್ಲೆಗೆ ಹೆಚ್ಚಿಗೆ ಕೊಟ್ಟಿರುವುದು ವ್ಯಕ್ತವಾಗಿದೆ, ಅನುದಾನ ಮಾತ್ರ ಬಿಡುಗಡೆ ಆಗುತ್ತಿದೆ.